# DPUE

# KANNADA

# NOTES

# ಪದ್ಯ 1 - ಕದಡಿದ ಸಲಿಲಂ ತಿಳಿವಂದದೆ

ನಾಗಚಂದ್ರ

ಕವಿ ಪರಿಚಯ :

ಹೆಸರು : ನಾಗಚಂದ್ರ

ಸ್ಥಳ : ವಿಜಯಪುರ

ಕಾಲ :ಹನ್ನೊಂದನೇ ಶತಮಾನದ ಉತ್ತರಾರ್ಧ ಮತ್ತು ಹನ್ನೆರಡನೇ ಶತಮಾನದ ಪೂರ್ವಾರ್ಧ

ಗುರು : ಬಾಲಚಂದ್ರ ಮೇಘಚಂದ್ರ ಯತಿಗಳು

ಕೃತಿಗಳು : ರಾಮಚಂದ್ರಚರಿತ ಪುರಾಣ (ಪಂಪ ರಾಮಾಯಣ)ಮತ್ತು ಮಲ್ಲಿನಾಥ ಪುರಾಣ.

ಬಿರುದುಗಳು : ಭಾರತೀ ಕರ್ಣಪೂರ, ಕವಿತಾ ಮನೋಹರ , ಸಾಹಿತ್ಯ ವಿದ್ಯಾಧರ , ಚತುರ ಕವಿ , ಜನಸ್ಥಾನರತ್ನ ಪ್ರದೀಪ , ಸೂಕ್ತಿಮುಕ್ತಾವತಂಸ ಇತ್ಯಾದಿ.

ಈತ ತನ್ನನ್ನು 'ಅಭಿನವ ಪಂಪ ' ಎಂದು ಕರೆದುಕೊಂಡಿದ್ದಾನೆ

ಭಾವಾರ್ಥ

ವಚನ - ರಾವಣನು ಧ್ರುವ ಮಂಡಲ ದಂತೆ ಚಲನೆಯಿಲ್ಲದೆ ಕುಳಿತು ಮನಸ್ಸನ್ನು ಏಕಾಗ್ರತೆಯಲ್ಲಿ ಇಟ್ಟುಕೊಂಡು ದಿವ್ಯಮಂತ್ರವನ್ನು ಉಚ್ಚರಿಸಿ ವಿದ್ಯಾದೇವತೆ (ಬಹು ರೂಪಿಣಿ )ಯನ್ನು ಒಲಿಸಿಕೊಳ್ಳುತ್ತಾನೆ.

1. ಆ ವಿದ್ಯಾದೇವತೆ ಮಳೆಗಾಲದ ಆರಂಭದಲ್ಲಿ ಕಂಡು ಬರುವ ಸಿಡಿಲಿನ ಆರ್ಭಟವನ್ನು ಮೀರಿಸುವಂತೆ , ಯಮನ ನಾಲಗೆ ಅಲ್ಲಾಡುವಂತೆ , ಎರಡೂ ಕೈಗಳನ್ನು ಚಾಚಿಕೊಂಡು ರಾವಣನ ಎದುರಿನಲ್ಲಿ ಪ್ರತ್ಯಕ್ಷವಾದಳು .

ವಚನ - ಹೀಗೆ ಪ್ರತ್ಯಕ್ಷಗೊಂಡ ವಿದ್ಯಾದೇವತೆ , ತಾನು ಚಕ್ರಧರನಾದ ಲಕ್ಷ್ಮಣನನ್ನು ಮತ್ತು ಚರಮ ದೇಹ ಧಾರಿಯಾದ ರಾಮನನ್ನು ಹೊರತುಪಡಿಸಿ ಉಳಿದವರು ಯಾರನ್ನೂ "ಬದುಕಲೀಯೆನು " ಎಂದು ನುಡಿಯುತ್ತಾಳೆ . ಆ ಮಾತಿಗೆ ರಾವಣನು - "ಉಳಿದವರು ಯಾರು ಅಳಿದರೂ ಉಳಿದರೂ ತನಗೇನು" - ಎನ್ನುತ್ತಾ ಶಾಂತಿ ಜಿನ ಭವನಕ್ಕೆ ಮೂರು ಸುತ್ತು ಪ್ರದಕ್ಷಿಣೆಗೈದು ತನ್ನ ಅಂತಃಪುರಕ್ಕೆ ಬರಲು, ಅಲ್ಲಿದ್ದ ಅಂಗದನೇ ಮೊದಲಾದವರು ಹೊರ ಹೊರಟು ತಮ್ಮ ಬಿಡಾರವನ್ನು ಹೊಕ್ಕರು .

2. ಇತ್ತ ರಾವಣನು, ತನ್ನ ರಾಣಿ ವಾಸದವರನ್ನು ಅಪಹಾಸ್ಯ (ನಿಂದಿಸಿದ) ಮಾಡಿ ಕಾಡಿದ ,ಸೊಕ್ಕಿದ ವೈರಿಗಳನ್ನು ಎದುರಿಸಿ ಕೊಲ್ಲುವ ಹವಣಿಕೆಯಲ್ಲಿ ,

ಗಾಯಗೊಂಡ ಸಿಂಹದಂತೆ ಗರ್ಜಿಸಿ, ಕೆಂಪು ಗರಿ ಮೂಡಿದ ದುಂಬಿಯಂತೆ ಕಾಣುವ, ಕೋಪದಿಂದ ಕೆಂಪಾದ ಕಣ್ಣುಗಳಿಂದ ಮಂಡೋದರಿಯ ಬಾಡಿದ ಮುಖ ಕಮಲವನ್ನು ದೀರ್ಘವಾಗಿ ನೋಡಿದನು .

ವಚನ - ಆಕೆಯನ್ನು ಹಾಗೂ ಅಂತಃಪುರದ ಸಮಸ್ತ ಸತಿ ಸಮುದಾಯವನ್ನು ನೋಡಿ , "ನಿಮಗೆ ಇಂತಹ ಅವಮಾನವನ್ನು ಮಾಡಿದ ಅಂಗದನೆ ಮುಂತಾದವರನ್ನು ಕಣ್ಣು ಮುಚ್ಚಿ ತೆರೆಯುವುದರೊಳಗೆ ಸೆರೆ ಹಿಡಿದು ನಿಮ್ಮ ಮುಂದೆ ನಿಲ್ಲಿಸಿ ಅಪಮಾನಗೊಳಿಸಿ ಸೋಲಿಸುವೆ" ಎಂದು ಸಂತೈಸುತ್ತಾನೆ . ಬಳಿಕ ಶಾಂತಿ ಜಿನಮಂದಿರದಲ್ಲಿ ಮಹಾಪೂಜೆಯನ್ನು ಮಾಡಿಸಿ , ಅಮೃತದಂತಹ ಆಹಾರವನ್ನು ಸೇವಿಸಿ, ತನ್ನ ಉಪವಾಸ ವ್ರತವನ್ನು ಕೊನೆಗೊಳಿಸುತ್ತಾನೆ. ಅನಂತರ ಬಹು ರೂಪಿಣಿ ವಿದ್ಯಾದೇವತೆಯ ವಿದ್ಯಾ ಪ್ರಭಾವವನ್ನು ಪರೀಕ್ಷಿಸಿ , ಸಂತೋಷವನ್ನು ಹೃದಯದಲ್ಲಿ ತುಂಬಿ ಕೊಂಡವನಾಗಿ -

3. ಇನ್ನು ನನಗೆ ಸಮಾನರು, ನನ್ನಿಂದ ಅಧಿಕ ಪರಾಕ್ರಮಿಗಳು, ಮೂರು ಲೋಕಗಳಲ್ಲಿ ಯಾರಿದ್ದಾರೆ ?ನನ್ನೊಡನೆ ಇದಿರಾಗಿ ಕಾದಾಡುವವರು ಯಾರು ? ಎಂದು ಭುಜ ದಂಡಗಳನ್ನು ಮುಟ್ಟಿ ನೋಡಿ, ಸೀತೆಯ ಮುಖ ಕಮಲವನ್ನು ನೋಡುವ ಕಾತರದಿಂದ ಹೂವಿನ ಬಾಣಗಳಿಲ್ಲದ ಕಾಮದೇವ ನಂತೆ ರಾವಣನು ಪ್ರಮದವನಕ್ಕೆ ಬರುತ್ತಾನೆ .

ಹಾಗೆ ಇದ್ದಕ್ಕಿದಂತೆ ಬರುತ್ತಿರುವ ರಾವಣನ ಪುರುಷ ಸೌಂದರ್ಯವನ್ನು ಸಮೀಪದಲ್ಲಿದ್ದ ಖಚರ ಸ್ತ್ರೀಯರು ಸೀತಾ ದೇವಿಗೆ ತೋರಿಸಿದಾಗ-

4. ರಾವಣನ ರೂಪವು ಸೀತೆಗೆ ಹುಲ್ಲಿಗೆ ಸಮಾನವಾಗಿ ಕಂಡಿತು .ಪತಿ ಭಕ್ತಿಯಲ್ಲಿ ಈ ಸೀತೆಯನ್ನು ಹೋಲುವ ಪುಣ್ಯವತಿಯರು, ಸದ್ಭಾವನೆಯನ್ನು ಒಳಗೊಂಡ ಸತಿಯರು ಯಾರಿದ್ದಾರೆ ?

5. ಸೀತೆ ತನ್ನ ಮನಸ್ಸಿನಲ್ಲಿ - "ನಾನಿನ್ನು ಲಕ್ಷ್ಮಣನ, ರಾಮನ ಕುರಿತಾಗಿ ಏನು ಕೆಟ್ಟ ವಾರ್ತೆಯನ್ನು ಕೇಳುವನೋ" ಎಂದು ಯೋಚಿಸುತ್ತಾ, ರಾವಣನ ಆಗಮನದಿಂದ ತಲ್ಲಣಗೊಂಡಳು.

ವಚನ - ಹಾಗೆ ತಲ್ಲಣಿಸುತ್ತಿರುವ ಸೀತೆಯ ಬಳಿಗೆ ರಾವಣನು ಬಂದು, "ನಾನೀಗ ಬಹುರೂಪಿಣಿ ವಿದ್ಯೆಯನ್ನು ಸಾಧಿಸಿದ್ದೇನೆ. ಇನ್ನು ನನ್ನನ್ನು ಎದುರಿಸಿ ಗೆಲ್ಲುವ ಇನ್ನೊಂದು ಸೈನ್ಯ ಇಲ್ಲ . ಆದುದರಿಂದ ನಿನ್ನ ಪ್ರೀತಿಯ ರಾಮನನ್ನು ಬಿಟ್ಟು ನನ್ನೊಡನೆ ಬಾ. ನನ್ನ ಜೊತೆಗೆ ಸಾಮ್ರಾಜ್ಯ ಸುಖವನ್ನು ಅನುಭವಿಸು" ಎನ್ನಲು ಸೀತೆ ದುಃಖಿತೆಯಾಗಿ -

6. "ಎಲೈ ರಾವಣ, ನೀನು ನನ್ನ ಮೇಲೆ ಕರುಣೆ ತೋರುವುದಾದರೆ, ಯುದ್ಧದಲ್ಲಿ ರಾಮನ ಆಯುಷ್ಯ ಇರುವವರೆಗೆ ನನ್ನ ಹತ್ತಿರ ಬರಬೇಡ" - ಎಂದು ಹೇಳುತ್ತಾ ಸೀತೆ ನೆಲಕ್ಕೆ ಬಿದ್ದು ಮೂರ್ಛಿತಳಾದಳು.

7. ಸೀತೆ ಮೂರ್ಛಿತಳಾದುದನ್ನು ಕಂಡು ರಾವಣನಿಗೆ ಅವಳ ಮೇಲೆ ಅನುಕಂಪ ಹುಟ್ಟಿತು . ತನ್ನನ್ನು ತಾನೇ ಹಳಿದುಕೊಂಡು ತನ್ನ ಪಾಪ ಕರ್ಮಕ್ಕೆ ಅಧೀನವಾಗಿ ಇಂಥ ದುಷ್ಪರಿಣಾಮವಾಯಿತಲ್ಲ ಎಂದು ಆತ ಚಿಂತಿಸಿದನು.

8. ಕದಡಿದ ನೀರು ತಿಳಿಯಾಗುವಂತೆ ತನ್ನನ್ನು ತಾನೇ ತಿದ್ದಿಕೊಂಡ ರಾವಣನು ಸೀತೆಯ ಮೇಲೆ ವೈರಾಗ್ಯ ತಾಳಿದನು. "ಉದಾತ್ತ ನಾದವನಲ್ಲಿ (ಶ್ರೇಷ್ಠನಾದವನಲ್ಲಿ) ದೃಢವಾದ ಅನುಚಿತ ಪ್ರೀತಿ ಹುಟ್ಟುವುದಿಲ್ಲ" ಅಲ್ಲವೇ?

9. ತನ್ನನ್ನು ಆವರಿಸಿದ ಸಂಧ್ಯಾರಾಗದ ಪ್ರೀತಿಯನ್ನು (ಕತ್ತಲೆಯನ್ನು) ಸೂರ್ಯನು ಕಳಚಿಕೊಳ್ಳುವುದಿಲ್ಲವೇ ? ಹಾಗೆಯೇ ಒಮ್ಮೆ ಹುಟ್ಟಿದ ಅನುಚಿತ ಅನುರಾಗ ಸಲ್ಲದು ಎನಿಸಿದಾಗ ಉದಾತ್ತ ನಾದವನು ಅದನ್ನು ದೂರ ಮಾಡದೇ ಇರಲಾರನು.

ವಚನ - ಹೀಗೆ ರಾವಣನ ಮನಸ್ಸಿನಲ್ಲಿ ಹುಟ್ಟಿದ ಕರುಣಾರಸ ಇಷ್ಟರ ತನಕ ಆತನನ್ನು ಆವರಿಸಿದ್ದ ಸೀತೆಯ ಮೇಲಿನ ಅನುರಾಗವನ್ನು ತೊಡೆದು ಹಾಕಿತು . ನಂತರ ತನ್ನ ಸ್ವಕೀಯ ಆಪ್ತರಿಗೆ ಆತ ಹೀಗೆಂದು ಹೇಳಿದನು -

10. ತನ್ನ ಗುಣ ಪರಿಪಾಲನೆಗಾಗಿ ಈಕೆ ನನ್ನ ಕಡೆಗೆ ಆಕರ್ಷಿತಳಾಗಳಿಲ್ಲ .

ದಿವ್ಯ ಭೂಷಣ, ವಸ್ತ್ರ , ನನ್ನ ದೇಹ ಸೌಂದರ್ಯಗಳನ್ನು ಒಲ್ಲದೆ ನನ್ನ ಈ ರಾಜ್ಯ ಲಕ್ಷ್ಮಿಯನ್ನು ಹುಲ್ಲು ಕಡ್ಡಿ ಎಂದು ಬಗೆದಳು. ಆದರೆ ಪೌರುಷವನ್ನು ಪ್ರೀತಿಸುವ ನಾನು ನನ್ನ ಪಾಪವು ನನಗೇ ಹಾನಿಯನ್ನುಂಟು ಮಾಡುವುದನ್ನು ಅರಿಯಲಿಲ್ಲ .

11. ಇವರು ಪರಸ್ಪರ ಪ್ರಾಣಪ್ರಿಯರು .ಕಾರಣವಿಲ್ಲದೆ, ಕರ್ಮವಶದಿಂದ, ಕಾಮ ವ್ಯಾಮೋಹದಿಂದ, ನಾನು ಇವರನ್ನು ಅಗಲಿಸಿದೆ. ಇದರಿಂದ ಅವಿವೇಕಿಯಾದ ನನ್ನ ಕುಲದ ಗೌರವ ನಾಶವಾಯಿತು .

12. ರಾಮನಿಂದ ಅಗಲಿಸಿ ತಂದು ಈ ಸ್ತ್ರೀಗೆ (ಸೀತೆಗೆ )ಇಂಥ ದುಃಖವನ್ನು ಉಂಟು ಮಾಡಿದೆ. ಕಾಮ ವ್ಯಾಮೋಹದಿಂದ ನನ್ನ ಅಪಕೀರ್ತಿ ಎಂಬ ನಗಾರಿಯ ಧ್ವನಿ ಎಂಟು ದಿಕ್ಕುಗಳಲ್ಲಿ ವ್ಯಾಪಿಸುವಂತೆ ಮಾಡಿದೆ.

13. ನನ್ನ ತಮ್ಮ ವಿಭೀಷಣನು ನನಗೆ ಪ್ರೀತಿಯಿಂದ ಹಿತೋಪದೇಶ ಮಾಡಿದನು . ಆದರೆ ಆತನ ಮಾತನ್ನು ನಾನು ಕೇಳದೆ ,ಅವನನ್ನು ಜರೆದು , ವಿನೀತ ನಾಗಿದ್ದವನನ್ನು ವೈರಿಯಾಗಿಸಿಕೊಂಡೆ. ಕಾಮ ವ್ಯಸನಕ್ಕೆ ಅಧೀನನಾದವನು ಹಿತ- ಅಹಿತದ ಚಿಂತೆಯನ್ನು ಯಾಕಾದರೂ ಮಾಡುತ್ತಾನೆ ? (ಮಾಡುವುದಿಲ್ಲ )

14. ತನ್ನ ಯಶಸ್ಸಿನ ನಾಶ, ತನಗೆ ಉಂಟಾಗುವ ಸೋಲು, ಪ್ರಸಿದ್ಧವಾದ ತನ್ನ ಉತ್ತಮ ಮನಸ್ಥಿತಿಯ ಕೇಡು, ತನ್ನ ಔನ್ನತ್ಯದ ಭಂಗ, ಪರಲೋಕದಲ್ಲಿ ತನಗೆ ಸಿಗಲಿರುವ ಸದ್ಗತಿಯ ನಾಶ, ತನ್ನ ಆತ್ಮೀಯರಿಗೆ ಉಂಟಾಗುವ ಬೇಸರ, ತನಗೆ ಉಂಟಾಗುವ ಅಪವಾದ , ಇವೆಲ್ಲವನ್ನೂ ವ್ಯಸನಿಗಳಾದವರು, ಕಾಮವ್ಯಾಮೋಹವೆಂಬ ಮದ್ಯದಿಂದ ಅಮಲೇರಿದವರು , ತಿಳಿಯುವವರೇ (ತಿಳಿಯುವುದಿಲ್ಲ )

ವಚನ - ಎಂದು ಉದ್ವೇಗ ಪರನಾಗಿ ನುಡಿದು , ತನ್ನ ಮನಸ್ಸಿನಲ್ಲಿ ಹೀಗೆ ತೀರ್ಮಾನಿಸಿದನು.

15. ಸೀತೆಯನ್ನು ಈಗಲೇ ಕರೆದುಕೊಂಡು ಹೋಗಿ ಶ್ರೀರಾಮನಿಗೆ ಒಪ್ಪಿಸಿದರೆ ನನ್ನ ಇದುವರೆಗಿನ ಪರಾಕ್ರಮ, ಸಾಮರ್ಥ್ಯ, ಬಿರುದುಗಳು ವ್ಯರ್ಥವಾದೀತು, ಮಾಸಿ ಹೋದೀತು.

ಹಾಗಾಗದಿರಲು, ಎರಡೂ ಸೈನ್ಯಗಳು ನನ್ನ ಬಾಹು ಬಲವನ್ನು ಹೊಗಳು ತ್ತಿರಲು , ನಾನು ರಾಮ ಲಕ್ಷ್ಮಣರ ಜತೆ ಯುದ್ಧ ಮಾಡಿ ಅವರನ್ನು ಸೋಲಿಸಿ, ರಥ ಹೀನರನ್ನಾಗಿ ಮಾಡಿ, ಸೆರೆ ಹಿಡಿದು ತಂದು ಸೀತೆಯನ್ನು ರಾಮನಿಗೆ ಒಪ್ಪಿಸುತ್ತೇನೆ.

ವಚನ - ಎಂದು ನಿಶ್ಚಯಿಸಿ ತನ್ನ ಅರಮನೆಗೆ ಬಂದನು .

##################

ಪ್ರಶ್ನೋತ್ತರಗಳು ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು

1. ಕೃತಾಂತ ಜಿಹ್ವೆ ಪೊಡಕರಿಸುವವೋಲ್.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರ ಚರಿತ ಪುರಾಣದಿಂದ ಆರಿಸಲಾದ 'ಕದಡಿದ ಸಲಿಲಂ ತಿಳಿವಂದದೆ' - ಎಂಬ ಪಠ್ಯದಿಂದ ನೀಡಲಾಗಿದೆ . ರಾವಣನ ಮುಂದೆ ಪ್ರತ್ಯಕ್ಷಳಾದ ವಿದ್ಯಾದೇವತೆಯ ಬಗ್ಗೆ ಕವಿ ಈ ಮಾತನ್ನು ಹೇಳುತ್ತಾನೆ .

ರಾಮ ಲಕ್ಷ್ಮಣರನ್ನು ಕೊಂದು ಸೀತೆಯನ್ನು ತನ್ನವಳನ್ನಾಗಿ ಮಾಡುವ ಉದ್ದೇಶದಿಂದ ರಾವಣನು ಧ್ರುವ ಮಂಡಲದಂತೆ ನಿಶ್ಚಲನಾಗಿ ಕುಳಿತು ಮನಸ್ಸನ್ನು ಏಕಾಗ್ರತೆಯಲ್ಲಿ ಟ್ಟುಕೊಂಡು ದಿವ್ಯ ಮಂತ್ರದಿಂದ ವಿದ್ಯಾದೇವತೆಯನ್ನು ಒಲಿಸಿಕೊಂಡನು . ಆಗ ಮಳೆಗಾಲದ ಆರಂಭದ ದಿನಗಳ ಸಿಡಿಲಿನ ಗರ್ಜನೆ ಯನ್ನು ಮೀರಿಸುವಂತೆ, ಯಮನ ನಾಲಗೆ ಅಲ್ಲಾಡುವಂತೆ, ಬೆಸಸು ಬೆಸಸು ಎಂದು ನುಡಿಯುತ್ತಾ ತನ್ನ ಎರಡು ಕೈಗಳನ್ನು ಹರಡಿಕೊಂಡು ಬಹುರೂಪಿಣಿ ವಿದ್ಯಾದೇವತೆ ರಾವಣನ ಎದುರು ಪ್ರತ್ಯಕ್ಷವಾದ ಸಂದರ್ಭ ಇದಾಗಿದೆ .

ಈ ವಾಕ್ಯದಲ್ಲಿ ರಾವಣನ ಎದುರು ಪ್ರತ್ಯಕ್ಷಳಾದ ವಿದ್ಯಾದೇವತೆಯ ಭೀಕರ ಸ್ವರೂಪದ ವರ್ಣನೆಯಿದೆ.

2. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆ?

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿ ವಂದದೆ - ಎಂಬ ಪಠ್ಯ ಭಾಗದಿಂದ ನೀಡಲಾಗಿದೆ . ವಿದ್ಯಾ ದೇವತೆಯನ್ನು ಒಲಿಸಿಕೊಂಡ ರಾವಣನು ತನ್ನ ಬಗ್ಗೆ ಹೆಮ್ಮೆಯಿಂದ ಆಡಿಕೊಳ್ಳುವ ಮಾತು ಇದಾಗಿದೆ .

ತನ್ನೆದುರು ಪ್ರತ್ಯಕ್ಷಳಾದ ಬಹು ರೂಪಿಣಿ ವಿದ್ಯೆಯ ಅನುಗ್ರಹವನ್ನು ಪಡೆದ ರಾವಣನು ವಿದ್ಯಾ ಪ್ರಭಾವವನ್ನು ಪರೀಕ್ಷಿಸಿ ನೋಡುತ್ತಾನೆ .ಅವಳ ಸಾಮರ್ಥ್ಯದಿಂದ ತೃಪ್ತಿಗೊಂಡ ಆತನ ಹೃದಯದಲ್ಲಿ ಸಂತೋಷ ತುಂಬಿಕೊಳ್ಳುತ್ತದೆ. ಆಗ ರಾವಣನು ತನಗೆ ಮೂರು ಲೋಕದಲ್ಲೂ ಸಮ ಬಲರಾದವರು ಯಾರೂ ಇಲ್ಲ . ಯುದ್ಧದಲ್ಲಿ ತನ್ನನ್ನು ಎದುರಿಸಿ ಗೆಲ್ಲುವವರು ಯಾರು ಇಲ್ಲ ಎಂದು ಹೆಮ್ಮೆ ಪಡುವ ಸಂದರ್ಭ ಇದಾಗಿದೆ. ಈ ವಾಕ್ಯದಲ್ಲಿ ರಾವಣನ ಆತ್ಮವಿಶ್ವಾಸ ವ್ಯಕ್ತವಾಗುತ್ತದೆ .

3. ಏನಂ ಕೇಳ್ವಪೆನೋ....ಪೊಲ್ಲ ವಾರ್ತೆಯನ್.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ 'ಕದಡಿದ ಸಲಿಲಂ ತಿಳಿ ವಂದದೆ ' ಎಂಬ ಪಠ್ಯದಿಂದ ನೀಡಲಾಗಿದೆ . ರಾವಣನನ್ನು ಕಂಡ ಸೀತೆ ತನ್ನಲ್ಲೇ ಹೇಳಿಕೊಳ್ಳುವ ಮಾತು ಇದು .

ಬಹುರೂಪಿಣೀ ವಿದ್ಯಾ ದೇವತೆಯನ್ನು ಒಲಿಸಿಕೊಂಡ ರಾವಣನು ಸಂತೋಷದಿಂದ ಸೀತೆಯ ಮುಖ ಕಮಲವನ್ನು ನೋಡಲು ಕಾತರನಾಗಿ ಪ್ರಮದವನಕ್ಕೆ ಬರುತ್ತಾನೆ. . ಆತನ ಪುರುಷ ಸೌಂದರ್ಯವನ್ನು ಪಕ್ಕದಲ್ಲಿದ್ದ ಖಚರ ಸ್ತ್ರೀಯರು ಸೀತಾ ದೇವಿಗೆ ತೋರಿಸುತ್ತಾರೆ . ಆಗ ಸೀತೆಯು, ರಾಮ ಲಕ್ಷ್ಮಣರಿಗೆ ಸಂಬಂಧಿಸಿದ ಇನ್ನಾವ ಕೆಟ್ಟ ಸುದ್ದಿಯನ್ನು ನಾನು ಈತನಿಂದ ಕೇಳಬೇಕಾಗಿದೆಯೋ ಎಂದು ಮನಸ್ಸಿನಲ್ಲಿಯೇ ಕಳವಳಗೊಂಡ ಸಂದರ್ಭ ಇದಾಗಿದೆ.

ದೂರದಿಂದ ಬರುತ್ತಿರುವ ರಾವಣನನ್ನು ಕಂಡ ಸೀತೆಯ ಮಾನಸಿಕ ತಳಮಳ ಇಲ್ಲಿ ವ್ಯಕ್ತವಾಗಿದೆ.

4. ಅಸಾಧ್ಯಮಪ್ಪ ಮರುವಕ್ಕಮಿಲ್ಲ.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿ ವಂದದೆ - ಎಂಬ ಪಾಠದಿಂದ ನೀಡಲಾಗಿದೆ . ರಾವಣನು ಸೀತೆಯಲ್ಲಿ ಹೇಳುವ ಮಾತು ಇದು .

ಪ್ರಮದವನದಲ್ಲಿ ಖಚರ ಸ್ತ್ರೀಯರ ಕಾವಲಿನಲ್ಲಿರುವ ಸೀತೆಯ ಬಳಿಗೆ ಬಂದ ರಾವಣನು ತನಗೆ ಬಹು ರೂಪಿಣಿ ವಿದ್ಯೆಯು ವಶವಾಗಿದೆ. ಇನ್ನು ಯುದ್ಧದಲ್ಲಿ ನನ್ನನ್ನು ಸೋಲಿಸುವವರು ಯಾರೂ ಇಲ್ಲ . ಆದುದರಿಂದ ನೀನು ನಿನ್ನ

ಪ್ರೀತಿಯ ರಾಮನನ್ನು ಮರೆತು, ನನಗೆ ಒಲಿದು, ಸಾಮ್ರಾಜ್ಯ ಸುಖವನ್ನು ಅನುಭವಿಸು ಎಂದು ಹೇಳುವ ಸಂದರ್ಭ ಇದು .

ಈ ವಾಕ್ಯದಲ್ಲಿ ಬಹುರೂಪಿಣಿ ವಿದ್ಯೆಯನ್ನು ಒಲಿಸಿಕೊಂಡ ರಾವಣನ ಆತ್ಮವಿಶ್ವಾಸ ವ್ಯಕ್ತವಾಗುತ್ತದೆ.

5.ರಘುತನೂಜನಾಯುಃಪ್ರಾಣಂಬರೆಗಂ ಬಾರದಿರು.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿ ವಂದದೆ - ಎಂಬ ಪಠ್ಯದಿಂದ ನೀಡಲಾಗಿದೆ . ಈ ವಾಕ್ಯವನ್ನು ಸೀತೆ ರಾವಣನಲ್ಲಿ ಹೇಳುತ್ತಾಳೆ .

ಸೀತೆಯ ಬಳಿಗೆ ಬಂದು ರಾವಣನು ತನ್ನ ಸಾಮರ್ಥ್ಯವನ್ನು ತಿಳಿಸಿ, ಇನ್ನಾದರೂ ತನಗೆ ಒಲಿದು ಬರಬೇಕೆಂದು ಕೇಳಿಕೊಳ್ಳುತ್ತಾನೆ. ಆಗ ಸೀತೆ ತನ್ನ ಮನಸ್ಸಿನಲ್ಲಿ ಅತಿಯಾಗಿ ದುಃಖಿಸುತ್ತಾ - "ನಿನಗೆ ನನ್ನ ಮೇಲೆ ಕರುಣೆ ಇರುವುದಾದರೆ, ಯುದ್ಧರಂಗದಲ್ಲಿ ರಾಮನ ಆಯುಷ್ಯ ಇರುವವರೆಗೂ ನೀನು ನನ್ನ ಬಳಿ ಬಾರದಿರು" ಎನ್ನುತ್ತಾ ನೆಲಕ್ಕೆ ಬಿದ್ದು ಮೂರ್ಛಿತಳಾಗುವ ಸಂದರ್ಭ ಇದು .

ಈ ವಾಕ್ಯದಲ್ಲಿ ಸೀತೆಯ ದೃಢವಾದ ಪತಿಭಕ್ತಿ ವ್ಯಕ್ತವಾಗುತ್ತದೆ .

6. ಕದಡಿದ ಸಲಿಲಂ ತಿಳಿವಂದದೆ.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿವಂದದೆ - ಎಂಬ ಪಾಠದಿಂದ ನೀಡಲಾಗಿದೆ . ಈ ವಾಕ್ಯದಲ್ಲಿ ರಾವಣನ ಮನಃ ಪರಿವರ್ತನೆಯಾದ ಬಗ್ಗೆ ಕವಿ ಹೇಳುತ್ತಾನೆ .

ಸೀತೆ ಮೂರ್ಛೆ ತಪ್ಪಿ ನೆಲಕ್ಕುರುಳಿದ್ದನ್ನು ಕಂಡ ರಾವಣನಲ್ಲಿ ಅವಳ ಬಗೆಗಿನ ವ್ಯಾಮೋಹ ದೂರವಾಗಿ ವೈರಾಗ್ಯ ಹುಟ್ಟಿಕೊಂಡಿತು. ಆಕೆಯ ಬಗ್ಗೆ ಕರುಣೆ ಅನುಕಂಪ ಮೂಡಿತು . ತನ್ನ ನೀಚ ಕೆಲಸದ ಬಗ್ಗೆ ದುಃಖಿತಗೊಂಡ ರಾವಣ ನ ಮನಸ್ಸು ಈಗ ಬದಲಾಗಿ ಹೋಯಿತು. ಸೀತೆಯನ್ನು ಅಪಹರಿಸುವ ಸಂದರ್ಭದಲ್ಲಿ ಕದಡಿ ಹೋಗಿದ್ದ ರಾವಣನ ಮನಸ್ಸೆಂಬ ಕೊಳವು ಈಗ ತನಗೆ ತಾನೇ ತಿಳಿಗೊಂಡು, ಆಕೆಯ ಕುರಿತಾದ ವ್ಯಾಮೋಹದಿಂದ ಬಿಡಿಸಿಕೊಂಡು ನಿರ್ಮಲವಾಗಿತ್ತು .

ಈ ವಾಕ್ಯದಲ್ಲಿ ಕವಿಯು ರಾವಣನ ಮನಸ್ಸು ಪರಿವರ್ತನೆಗೊಂಡಿದ್ದನ್ನು ತಿಳಿಸಿದ್ದಾನೆ.

7. ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿ ವಂದದೆ - ಎಂಬ ಪಠ್ಯದಿಂದ ನೀಡಲಾಗಿದೆ . ಈ ವಾಕ್ಯವನ್ನು ಕವಿ, ಮನ ಪರಿವರ್ತನೆಗೊಂಡ ರಾವಣನ ಬಗ್ಗೆ ಹೇಳುತ್ತಾನೆ .

ಸೀತೆಯು ಮೂರ್ಛೆ ತಪ್ಪಿ ನೆಲದ ಮೇಲೆ ಬಿದ್ದಾಗ ರಾವಣನಲ್ಲಿ ಅವಳ ಬಗ್ಗೆ ಕರುಣೆ , ಅನುಕಂಪಗಳು ಮೂಡುತ್ತವೆ . ಅದರೊಂದಿಗೆ ಆತನನ್ನು ವ್ಯಾಪಿಸಿದ ಸೀತೆಯ ಮೇಲಿನ ವ್ಯಾಮೋಹ, ಕಾಮ ವಿಕಾರಗಳು ದೂರವಾಗುತ್ತವೆ . ಈ ಸಂದರ್ಭವನ್ನು ವಿವರಿಸುತ್ತಾ ಕವಿಯು ರಾವಣನ ಸ್ವಭಾವ ಸಹಜವಾದ ಉದಾತ್ತ ಗುಣವನ್ನು ವರ್ಣಿಸುತ್ತಾನೆ . ಶ್ರೇಷ್ಠನಾದ ವ್ಯಕ್ತಿಯಲ್ಲಿ ಅನುಚಿತವಾದ ಪ್ರಣಯವು ಸ್ಥಿರವಲ್ಲ - ಎಂದು ಕವಿ ಹೇಳುತ್ತಾನೆ .

ಈ ವಾಕ್ಯದಲ್ಲಿ ನಾಗಚಂದ್ರನು ರಾವಣನ ಉದಾತ್ತ ವ್ಯಕ್ತಿತ್ವವನ್ನು ಎತ್ತಿ ಹಿಡಿಯುತ್ತಾನೆ.

8. ಅಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿವಂದದೆ - ಎಂಬ ಪಠ್ಯ ಭಾಗದಿಂದ ನೀಡಲಾಗಿದೆ . ಇದನ್ನು ರಾವಣನು ತನ್ನ ಬಗ್ಗೆ ತನ್ನಲ್ಲೇ ಹೇಳಿಕೊಳ್ಳುತ್ತಾನೆ .

ಸೀತೆಯು ರಾವಣನಿಗೆ ಒಲಿಯಲಿಲ್ಲ . ಆತನ ಪ್ರೀತಿ ಯನ್ನಾಗಲಿ, ವೈಭವದ ಬದುಕನ್ನಾಗಲೀ, ದಿವ್ಯ ಭೂಷಣ, ವಸ್ತ್ರ, ಪುರುಷ ಸೌಂದರ್ಯ, ರಾಜ್ಯದ ಸಂಪತ್ತು - ಎಲ್ಲವನ್ನೂ ಹುಲ್ಲು ಕಡ್ಡಿಗೆ ಸಮನಾಗಿ ಭಾವಿಸುತ್ತಾಳೆ. ಆದರೆ ಪೌರುಷವನ್ನು ಪ್ರೀತಿಸುವ ತಾನು ತನ್ನ ಪಾಪವೇ ತನಗೆ ಹಾನಿಯನ್ನುಂಟು ಮಾಡುವುದನ್ನು ಅರಿಯಲಿಲ್ಲ - ಎಂದು ರಾವಣನು ತನ್ನ ಬಗ್ಗೆ ಜಿಗುಪ್ಸೆಗೊಳ್ಳುತ್ತಾನೆ.

ಈ ವಾಕ್ಯದಲ್ಲಿ ರಾವಣನ ಆತ್ಮವಿಮರ್ಶೆ ವ್ಯಕ್ತವಾಗಿದೆ.

9. ಕಂದರ್ಪ ವಿಮೊಹದಿಂದಗಲ್ಚಿದೆ.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿವಂದದೆ - ಎಂಬ ಪಠ್ಯದಿಂದ ನೀಡಲಾಗಿದೆ. ಈ ಮಾತನ್ನು ರಾವಣನು ತನ್ನ ಬಗ್ಗೆ ತಾನೇ ಹೇಳಿಕೊಳ್ಳುತ್ತಾನೆ.

ಸೀತೆಯು ಮೂರ್ಛೆ ತಪ್ಪಿ ನೆಲಕ್ಕೆ ಬಿದ್ದುದನ್ನು ಕಂಡ ರಾವಣನು ಆಕೆಯ ಬಗ್ಗೆ ಮರುಕ ತಾಳುತ್ತಾನೆ . ಆಕೆಯನ್ನು ಅಪಹರಿಸಿದ್ದ ಕ್ಕಾಗಿ ಅವನಲ್ಲಿ ಪಶ್ಚಾತ್ತಾಪ ಮೂಡುತ್ತದೆ . ಪ್ರಾಣ ಪ್ರಿಯರಾದ ರಾಮ -

ಸೀತೆಯರನ್ನು ನಾನು ಕರ್ಮ ವಶದಿಂದ ಅಗಲಿಸಿದೆ. ಇದರಿಂದ ನನ್ನ ಕುಲದ ಹಿರಿಮೆ ನಾಶವಾಯಿತು. ನಾನು ಅವಿವೇಕಿ -ಎಂದು ರಾವಣನು ಯೋಚಿಸುವ ಸಂದರ್ಭ ಇದು .

ಈ ವಾಕ್ಯದಲ್ಲಿ ರಾವಣನಿಗೆ ಸೀತೆಯ ಮೇಲೆ ಮೂಡಿದ ವೈರಾಗ್ಯ ಮತ್ತು ಆತನ ಮನ ಪರಿವರ್ತನೆಯ ಚಿತ್ರಣವಿದೆ .

10. ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ.

ಈ ವಾಕ್ಯವನ್ನು ನಾಗಚಂದ್ರನ ರಾಮಚಂದ್ರ ಚರಿತ ಪುರಾಣದಿಂದ ಆರಿಸಲಾದ - ಕದಡಿದ ಸಲಿಲಂ ತಿಳಿ ವಂದದೆ - ಎಂಬ ಪಠ್ಯದಿಂದ ನೀಡಲಾಗಿದೆ . ರಾವಣನು ತನ್ನ ಮನಸ್ಸಿನೊಳಗೆ ಯೋಚಿಸುವ ವಿಷಯವಿದು.

ಸೀತಾಪಹರಣ ಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟ ರಾವಣ ಆಕೆಯನ್ನು ರಾಮನಿಗೆ ಹಿಂದಿರುಗಿಸುವ ನಿರ್ಧಾರಕ್ಕೆ ಬರುತ್ತಾನೆ . ಆದರೆ ಅವನು ಆ ಕೂಡಲೇ ಆಕೆಯನ್ನು ಕರೆದುಕೊಂಡು ಹೋಗಿ ಶ್ರೀರಾಮನಿಗೆ ಒಪ್ಪಿಸಿದರೆ ತನ್ನ ಇದುವರೆಗಿನ ಪರಾಕ್ರಮ, ಸಾಮರ್ಥ್ಯ, ಬಿರುದುಗಳು ವ್ಯರ್ಥವೆಂದು ಲೋಕ ತಿಳಿದೀತು. ಹಾಗಾಗಬಾರದು. ಎರಡೂ ಸೈನ್ಯದವರು ತನ್ನ ಪರಾಕ್ರಮವನ್ನು ಹೊಗಳುವಂತೆ, ರಾಮ ಲಕ್ಷ್ಮಣರ ಜತೆ ಯುದ್ಧ ಮಾಡಿ, ಅವರನ್ನು ಸೋಲಿಸಿ ವಿರಥರನ್ನಾಗಿ ಮಾಡಿ, ಸೆರೆ ಹಿಡಿದು ಕರೆತಂದು ಸೀತೆಯನ್ನು ಒಪ್ಪಿಸುವೆ ಎಂದು ತನ್ನ ಮನಸ್ಸಿನಲ್ಲಿ ನಿರ್ಧಾರವನ್ನು ಮಾಡುತ್ತಾನೆ .

ಈ ವಾಕ್ಯದಲ್ಲಿ ಬದಲಾದ ರಾವಣನ ಮಾನಸಿಕ ಔನ್ನತ್ಯದ ಚಿತ್ರಣವಿದೆ .

ಆ. ಒಂದು ಅಂಕದ ಪ್ರಶ್ನೆಗಳು .

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?

ರಾವಣನ ಎದುರು ಬಹುರೂಪಿಣಿ ಎಂಬ ವಿದ್ಯಾದೇವತೆ ಪ್ರತ್ಯಕ್ಷವಾಯಿತು.

2. ಯಾರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು?

ರಾಮ ಲಕ್ಷ್ಮಣ ರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು.

3. ಮಯತನುಜೆ ಎಂದರೆ ಯಾರು?

ಮಯನ ಮಗಳಾದ ಮಂಡೋದರಿಯನ್ನು ಮಯತನೂಜೆ ಎನ್ನುವರು.

4. ಸೀತೆಯನ್ನು ರಾವಣ ಎಲ್ಲಿರಿಸಿದ್ದನು?

ಸೀತೆಯನ್ನು ರಾವಣ ಪ್ರಮದವನದಲ್ಲಿರಿಸಿದ್ದನು.

5. ರಾವಣನ ಆಗಮನವನ್ನು ಸೀತೆಗೆ ತೋರಿದವರು ಯಾರು?

ರಾವಣನ ಆಗಮನವನ್ನು ಖಚರ ಸ್ತ್ರೀಯರು ಸೀತೆಗೆ ತೋರಿಸಿದರು.

6. ಸೀತೆ ಯಾವುದನ್ನು ಹುಲ್ಲಿಗೆ ಸಮಾನವೆಂದು ಭಾವಿಸಿದಳು?

ಸೀತೆಯು ರಾವಣನ ರೂಪವನ್ನು ಹುಲ್ಲಿಗೆ ಸಮಾನವೆಂದು ಭಾವಿಸಿದಳು.

7. ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು?

ಯುದ್ಧರಂಗದಲ್ಲಿ ರಾಮನ ಆಯುಷ್ಯ ಇರುವವರೆಗೂ ತನ್ನ ಬಳಿ ಬರಬಾರದೆಂದು ಸೀತೆ ರಾವಣನಲ್ಲಿ ಬೇಡಿಕೊಂಡಳು.

8. ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು?

ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿತು.

9. ವಿಭೀಷಣ ಯಾರು?

ವಿಭೀಷಣನು ರಾವಣನ ತಮ್ಮ.

10. ಸೌಮಿತ್ರಿ ಎಂದರೆ ಯಾರು?

ಸುಮಿತ್ರೆಯ ಮಗನಾದ ಲಕ್ಷ್ಮಣನೇ ಸೌಮಿತ್ರಿ.

ಇ. ಎರಡು ಅಂಕಗಳ ಪ್ರಶ್ನೆಗಳು.

1. ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು ?

ರಾವಣನು ದಿವ್ಯ ಮಂತ್ರದಿಂದ ಬಹು ರೂಪಿಣಿ ವಿದ್ಯೆಯನ್ನು ಒಲಿಸಿಕೊಳ್ಳುತ್ತಾನೆ . ಆ ವಿದ್ಯೆಯು ತಾನು ಚಕ್ರಧರನಾದ ಲಕ್ಷ್ಮಣನನ್ನು ಮತ್ತು ಚರಮದೇಹಧಾರಿಯಾದ ರಾಮನನ್ನು ಬಿಟ್ಟು ಉಳಿದವರೆಲ್ಲರನ್ನೂ ನಾಶಗೊಳಿಸುತ್ತೇನೆ -

ಎಂದು ರಾವಣನಿಗೆ ಆಶ್ವಾಸನೆಯಿತ್ತಿತು.

2. ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು ?

ಬಹು ರೂಪಿಣಿ ವಿದ್ಯೆಯನ್ನು ಒಲಿಸಿಕೊಂಡು ತನ್ನ ಅಂತಃಪುರಕ್ಕೆ ಬಂದ ರಾವಣನು ದುಃಖಿತರಾದ ಮಡದಿಯರನ್ನು ಕಾಣುತ್ತಾನೆ . ಅವರಲ್ಲಿ "ನಿಮಗೆ ಇಂತಹ ಅವಮಾನವನ್ನು ಮಾಡಿದ ಅಂಗದನೇ ಮೊದಲಾದವರನ್ನು ಕ್ಷಣ ಮಾತ್ರದಲ್ಲಿ ಸೆರೆ ಹಿಡಿದು ತಂದು ನಿಮ್ಮ ಮುಂದೆ ನಿಲ್ಲಿಸಿ ಅವಮಾನಿಸುತ್ತೇನೆ" - ಎಂದು ಸಂತೈಸಿದನು.

3. ಸೀತೆಯ ತಲ್ಲಣಕ್ಕೆ ಕಾರಣವೇನು?

ಪ್ರಮದವನಕ್ಕೆ ರಾವಣನು ಬಂದ ವಿಚಾರವನ್ನು ತಿಳಿದ ಸೀತೆಯು, ನಾನು ರಾಮ ಲಕ್ಷ್ಮಣರ ಬಗ್ಗೆ ಯಾವ ಕೆಟ್ಟ ವಾರ್ತೆಯನ್ನು ಕೇಳಬೇಕಾಗಿ ಬರುವುದೋ ಎಂದು ತಲ್ಲಣಗೊಂಡಳು.

4. ರಾವಣನು ಸೊಕ್ಕಿನಿಂದ ಸೀತೆಯನ್ನು ಉದ್ದೇಶಿಸಿ ಆಡಿದ ಮಾತುಗಳು ಯಾವುವು ?

ತಲ್ಲಣಿಸುತ್ತಿರುವ ಸೀತೆಯ ಬಳಿಗೆ ಬಂದ ರಾವಣನು ಸೊಕ್ಕಿನಿಂದ, "ನನಗೆ ಈಗ ಬಹುರೂಪಿಣಿ ವಿದ್ಯೆ ವಶವಾಗಿದೆ. ಇನ್ನು ನನ್ನನ್ನು ಎದುರಿಸಿ ಗೆಲ್ಲುವ ವೈರಿ ಸೈನ್ಯ ಯಾವುದೂ ಇಲ್ಲ. ಆದುದರಿಂದ ನೀನು ನಿನ್ನ ಪ್ರೀತಿಯ ರಾಮನನ್ನು ಮರೆತು ನನ್ನೊಡನೆ ಬಾ . ನನ್ನೊಡನೆ ಸಾಮ್ರಾಜ್ಯ ಸುಖವನ್ನು ಅನುಭವಿಸು"- ಎಂದು ನುಡಿದನು .

5. ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿದ ಸಂದರ್ಭವನ್ನು ವಿವರಿಸಿ.

ತನ್ನ ಬಳಿಗೆ ಬಂದ ರಾವಣನಲ್ಲಿ ಸೀತೆ - "ಯುದ್ಧರಂಗದಲ್ಲಿ ರಾಮನ ಆಯುಷ್ಯ ಇರುವವರೆಗೆ ನೀನು ನನ್ನ ಬಳಿ ಬರಬೇಡ "ಎಂದು ಹೇಳುತ್ತಾ ನೆಲಕ್ಕೆ ಬಿದ್ದು ಮೂರ್ಛಿತಳಾದಳು. ಇದನ್ನು ಕಂಡ ರಾವಣನಿಗೆ ಸೀತೆಯಲ್ಲಿ ವೈರಾಗ್ಯ ಮೂಡಿತು.

6. ರಾವಣನು ತನ್ನ ಆಪ್ತರನ್ನು ಕುರಿತು ಏನೆಂದು ಹೇಳಿದನು ?

ರಾವಣನು ತನ್ನ ಆಪ್ತರಲ್ಲಿ- ಸೀತೆಯು ತನ್ನ ಸದ್ಗುಣಗಳನ್ನು ಉಳಿಸಿಕೊಳ್ಳುವುದಕ್ಕಾಗಿ ನನ್ನ ಕಡೆಗೆ ಆಕರ್ಷಿತಳಾಗಲಿಲ್ಲ . ದಿವ್ಯಭೂಷಣ, ವಸ್ತ್ರ, ಪುರುಷ ಸೌಂದರ್ಯ, ರಾಜ್ಯಲಕ್ಷ್ಮಿ -ಎಲ್ಲವನ್ನೂ ಹುಲ್ಲು ಕಡ್ಡಿ ಎಂದು ಬಗೆದಳು. ಆದರೆ ಪೌರುಷವನ್ನು ಪ್ರೀತಿಸುವ ನಾನು, ನನ್ನ ಪಾಪವು ನನಗೆ ಹಾನಿಯನ್ನುಂಟು ಮಾಡುವುದನ್ನು ಅರಿಯದೆ ಅವಳಲ್ಲಿ ವ್ಯಾಮೋಹ ಗೊಂಡೆನು - ಎಂದು ಹೇಳಿದನು.

7. ಈಗಲೇ ಸೀತೆಯನ್ನು ರಾಮನಿಗೆ ಒಪ್ಪಿಸಲು ರಾವಣ ಬಯಸಲಿಲ್ಲ ಏಕೆ?

ಕೂಡಲೇ ಸೀತೆಯನ್ನು ರಾಮನಿಗೆ ಒಪ್ಪಿಸಿದರೆ ತನ್ನ ಇದುವರೆಗಿನ ಪರಾಕ್ರಮ, ಸಾಮರ್ಥ್ಯ, ಬಿರುದುಗಳು ವ್ಯರ್ಥವೆಂದು ಜಗತ್ತು ಭಾವಿಸೀತು. ಹಾಗಾಗಬಾರದು ಎಂದು ರಾವಣನು ಸೀತೆಯನ್ನು ಕೂಡಲೇ ರಾಮನಿಗೆ ಒಪ್ಪಿಸಲು ಬಯಸಲ್ಲ.

8. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ ?

ರಾವಣನು ಅಂತಿಮವಾಗಿ ಎರಡು ಸೈನ್ಯದವರು ತನ್ನ ತೋಳ್ಬಲವನ್ನು ಹೊಗಳುವಂತೆ , ರಾಮ ಲಕ್ಷ್ಮಣರೊಡನೆ ಯುದ್ಧ ಮಾಡಿ, ಸೋಲಿಸಿ , ಸೆರೆ ಹಿಡಿದು ತಂದು ರಾಮನಿಗೆ ಸೀತೆಯನ್ನು ಒಪ್ಪಿಸುವೆ- ಎಂಬ ನಿರ್ಧಾರಕ್ಕೆ ಬರುತ್ತಾನೆ .

ಈ. ನಾಲ್ಕು ಅಂಕದ ಪ್ರಶ್ನೆಗಳು

1. ರಾವಣನು ಬಹುರೂಪಿಣಿ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

ರಾವಣ ಸೀತೆಯನ್ನು ಅಪಹರಿಸಿದಾಗ ರಾಮನ ಸೈನ್ಯ ಲಂಕೆಯನ್ನು ಮುತ್ತುತ್ತದೆ . ವಿಜಯಕ್ಕಾಗಿ ರಾವಣ ಬಹುರೂಪಿಣಿ ವಿದ್ಯೆಯನ್ನು ಸಾಧಿಸಲು ಶಾಂತಿಜಿನಾಲಯದಲ್ಲಿ ಅನನ್ಯ ಭಕ್ತಿಯಿಂದ ತಪೋ ಮಗ್ನನಾಗುತ್ತಾನೆ. ರಾವಣನು ಧ್ರುವ ಮಂಡಲದಂತೆ ನಿಶ್ಚಲನಾಗಿ ಕುಳಿತು ಮನಸ್ಸನ್ನು ಏಕಾಗ್ರತೆಯಲ್ಲಿ ಇಟ್ಟುಕೊಂಡು ದಿವ್ಯ ಮಂತ್ರದಿಂದ ವಿದ್ಯಾ ದೇವತೆಯನ್ನು ಒಲಿಸಿಕೊಳ್ಳುತ್ತಾನೆ . ಆಗ ತಾನೇ ಪ್ರಾರಂಭವಾದ ಮಳೆಗಾಲದ ಸಿಡಿಲಿನ ಗರ್ಜನೆ ಯನ್ನು ಮೀರಿ ಗರ್ಜಿಸುತ್ತಾ , ಯಮನ ನಾಲಗೆ ಅಲ್ಲಾಡುವಂತೆ ಕಾಣುತ್ತಾ ಬೆಸಸು ಬೆಸಸು - ಎಂದು ಹೇಳುತ್ತಾ ತನ್ನ ಎರಡು ಕೈಗಳನ್ನು ಹರಡಿಕೊಂಡು ವಿದ್ಯಾದೇವತೆ ರಾವಣನ ಎದುರು ಪ್ರತ್ಯಕ್ಷವಾಯಿತು. ಹೀಗೆ ತನ್ನೆದುರು ಕಾಣಿಸಿಕೊಂಡ ವಿದ್ಯಾ ದೇವತೆಯಲ್ಲಿ ತನ್ನ ಮನದ ಆಸೆಯನ್ನು ರಾವಣ ಹೇಳಿಕೊಂಡಾಗ, ಆ ದೇವತೆ ತಾನು " ಚಕ್ರಧರನಾದ ಲಕ್ಷ್ಮಣನನ್ನು ಮತ್ತು ಚರಮ ದೇಹಧಾರಿಯಾದ ರಾಮನನ್ನು ಬಿಟ್ಟು ಉಳಿದ ಯಾರನ್ನೂ ಬದುಕಲು ಬಿಡಲಾರೆ" ಎಂದು ನುಡಿಯುತ್ತದೆ. ಆ ಮಾತಿಗೆ ರಾವಣನು " ಉಳಿದವರು ಅಳಿದರೂ ಉಳಿದರೂ ನನಗೇನು ಪ್ರಯೋಜನ" ಎನ್ನುತ್ತಾ ದೇವತೆಗೆ ನಮಸ್ಕರಿಸಿ ಶಾಂತಿ ದಿನ ಭವನವನ್ನು ಮೂರು ಬಾರಿ ಪ್ರದಕ್ಷಿಣೆ ಬಂದು ಅಲ್ಲಿಂದ ಹೊರಡುವನು.

2. ಪ್ರಮದವನದಲ್ಲಿ ರಾವಣ - ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

ಸೀತೆಯನ್ನು ನೋಡಲು ರಾವಣ ಕಾತರನಾಗಿ ಪ್ರಮದವನಕ್ಕೆ ಬರುತ್ತಾನೆ. . ಅವನ ಪುರುಷ ಸೌಂದರ್ಯವನ್ನು ಖಚರ ಸ್ತ್ರೀಯರು ಸೀತೆಗೆ ತೋರಿಸುತ್ತಾರೆ. ರಾವಣನ ಸೌಂದರ್ಯವನ್ನು ಹುಲ್ಲು ಕಡ್ಡಿಗೆ ಸಮನಾಗಿ ಕಂಡ ಸೀತೆ - ಅವನು ರಾಮ ಲಕ್ಷ್ಮಣರ ಬಗ್ಗೆ ಏನು ಕೆಟ್ಟ ಸುದ್ದಿ ತಂದಿರುವನೋ ಎಂದು ತಲ್ಲಣ ಗೊಳ್ಳುತ್ತಾಳೆ . ಸೀತೆಯ ಬಳಿಗೆ ಬಂದ ರಾವಣನು, ಬಹುರೂಪಿಣಿ ವಿದ್ಯೆಯು ನನಗೆ ಸಿದ್ಧಿಸಿದೆ. ಇನ್ನು ನನ್ನನ್ನು ಎದುರಿಸುವ ವಿರೋಧಿ ಸೈನ್ಯ ಯಾವುದೂ ಇಲ್ಲ. ಆದುದರಿಂದ ನೀನು ನಿನ್ನ ಪ್ರೀತಿಯ ರಾಮನನ್ನು ಬಿಟ್ಟು ನನ್ನೊಡನೆ ಬಾ. ನನ್ನನ್ನು ಒಪ್ಪಿಕೊಂಡು ನನ್ನ ಜೊತೆಗೆ ಸಾಮ್ರಾಜ್ಯ ಸುಖವನ್ನು ಅನುಭವಿಸು .

ಎಂದು ಅಹಂಕಾರದಿಂದ ನುಡಿಯುತ್ತಾನೆ. ಇದನ್ನು ಕೇಳಿದ ಸೀತೆಯಲ್ಲಿ ದುಃಖ ಹೆಚ್ಚಾಗುತ್ತದೆ. ಆಕೆ "ಎಲೈ ರಾವಣನೇ ನೀನು ನನ್ನ ಮೇಲೆ ಕರುಣೆ ತೋರುವುದಾದರೆ, ಯುದ್ಧರಂಗದಲ್ಲಿ ರಾಮನ ಆಯುಷ್ಯ ಇರುವವರೆಗೆ ನನ್ನ ಹತ್ತಿರ ಬರಬೇಡ"- ಎಂದು ಹೇಳುತ್ತಾ ಪ್ರಜ್ಞೆ ತಪ್ಪಿ ನೆಲಕ್ಕೆ ಬೀಳುತ್ತಾಳೆ . ಇದನ್ನು ಕಂಡ ರಾವಣನಿಗೆ ಅವಳ ಮೇಲೆ ಅನುಕಂಪ ಹುಟ್ಟಿತ್ತದೆ. ಆತ ತನ್ನನ್ನು ತಾನೇ ಹಳಿದುಕೊಂಡು ತನ್ನ ಕೆಟ್ಟ ಕರ್ಮದ ಫಲವಾಗಿ ಇಂತಹ ದುಷ್ಪರಿಣಾಮ ವಾಯಿತು ಎಂದು ಚಿಂತಿಸುತ್ತಾನೆ .

3. ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ

ರಾವಣನ ಮನಃಪರಿವರ್ತನೆ ಈ ಪಠ್ಯದ ಮುಖ್ಯ ವಿಷಯ. ಸೀತೆ ಮೂರ್ಛೆತಪ್ಪಿ ನೆಲಕ್ಕುರುಳಿದಾಗ ರಾವಣನಿಗೆ ಅಕೆಯ ಮೇಲೆ ಅನುಕಂಪ ಮೂಡಿತು. ಸೀತೆಯ ಈ ಹೀನಸ್ಥಿತಿಗೆ ತಾನೇ ಕಾರಣವೆಂದು ತನ್ನನ್ನು ತಾನೇ ನಿಂದಿಸಿಕೊಂಡನು. ತನ್ನ ಪಾಪ ಕರ್ಮದಿಂದ ಇಂತಹ ದುಷ್ಪರಿಣಾಮವಾಯಿತಲ್ಲ ಎಂದು ಚಿಂತಿಸಿದನು. ಈ ಸಂದರ್ಭದಲ್ಲಿ ಕದಡಿದ ನೀರು ತಿಳಿಯಾಗುವಂತೆ ರಾವಣನ ಮನಸ್ಸು ತನ್ನಿಂದ ತಾನೇ ತಿಳಿಯಾಯಿತು. ಸೀತೆಯ ಬಗ್ಗೆ ಅವನಲ್ಲಿ ವೈರಾಗ್ಯ ಮೂಡಿತು. ಅವನ ಉದಾತ್ತ ಗುಣವು ವ್ಯಕ್ತವಾಯಿತು. ಅವನ ಮನಸ್ಸಿನಲ್ಲಿ ಮೂಡಿದ ಕರುಣಾರಸವು ಸೀತೆಯ ಮೇಲಿನ ವ್ಯಾಮೋಹವನ್ನು ತೊಡೆದು ಹಾಕಿತು.

DRAFT

4. ರಾವಣನಲ್ಲಿ ಕಂಡು ಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ ?

ರಾವಣನಿಗೆ ಸೀತೆಯ ಮೇಲಿರುವ ವ್ಯಾಮೋಹ ಅಳಿದು ಕರುಣೆ ಅನುಕಂಪಗಳು ನೆಲೆಸಿದ ಮೇಲೆ ರಾವಣನ ಮನಸ್ಸು ತಿಳಿಯಾಗಿ ಪರಿವರ್ತನೆಗೊಂಡಿತು . ಈ ಹೊತ್ತಿನಲ್ಲಿ ತಾನು ಮಾಡಿದ ಸೀತಾ ಪಹರಣದಂತಹ ಕೆಟ್ಟ ಕೆಲಸಕ್ಕೆ ಆತ ಪಶ್ಚಾತ್ತಾಪಪಡುತ್ತಾನೆ . ಆತ ತನ್ನ ಆಪ್ತರಲ್ಲಿ "ನನ್ನ ಪಾಪವು ನನಗೆ ಹಾನಿಯನ್ನುಂಟುಮಾಡಿತು . ರಾಮ ಸೀತೆಯರು ಪರಸ್ಪರ ಪ್ರಾಣಪ್ರಿಯರು. ಕಾರಣವಿಲ್ಲದೆ, ಕರ್ಮ ವಶದಿಂದ, ಕಾಮವ್ಯಾಮೋಹದಿಂದ ನಾನು ಅವರನ್ನು ಅಗಲಿಸಿದೆ. ಇದರಿಂದ ನನ್ನ ಕುಲದ ಗೌರವ ಹಾಳಾಯಿತು. ನನ್ನ ತಮ್ಮ ವಿಭೀಷಣ ಹಿತೋಪದೇಶ ಮಾಡಿದನು . ಆದರೆ ಆತನ ಮಾತನ್ನು ನಾನು ಕೇಳದೆ ಅವನನ್ನು ಜರೆದು, ವಿನೀತನಾಗಿದ್ದವನನ್ನು ವಿನಯ ಹೀನನೆಂದು ನಿಂದಿಸಿದೆ . ಕಾಮ ವ್ಯಸನಕ್ಕೆ ಅಧೀನನಾದವನು ಹಿತ ಅಹಿತದ ಚಿಂತನೆಯನ್ನು ಮಾಡುವುದಿಲ್ಲ" - ಎಂದು ಹೇಳುತ್ತಾ ಪಾಪಪ್ರಜ್ಞೆಯಲ್ಲಿ ನರಳುತ್ತಾನೆ.

5. ಕದಡಿದ ಸಲಿಲಂ ತಿಳಿವಂದದೆ ಈ ಕಾವ್ಯ ಭಾಗದಲ್ಲಿ ಕಂಡು ಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶೆ ಮಾಡಿ.

ಕದಡಿದ ಸಲಿಲಂ ತಿಳಿವಂದದೆ- ಎಂಬ ಪಠ್ಯ ಭಾಗದ ಆರಂಭದಲ್ಲಿ, ರಾವಣನು ರಾಮ ಲಕ್ಷ್ಮಣರ ವಿರುದ್ಧ ಗೆಲುವನ್ನು ಸಾಧಿಸಲು ಬಹುರೂಪಿಣಿ ವಿದ್ಯೆಯನ್ನು ಒಲಿಸಿಕೊಳ್ಳುತ್ತಾನೆ. ಅಕೆ ರಾಮ ಲಕ್ಷ್ಮಣರನ್ನು ತಾನು ಕೊಲ್ಲಲಾರೆ ಎಂದು ಹೇಳಿದಾಗಲೂ ರಾವಣ ಧೃತಿಗೆಡುವುದಿಲ್ಲ. ವಿದ್ಯೆ ವಶವಾದ ಸಂತೋಷದಲ್ಲಿ ಆತ ಸೀತೆಯ ಬಳಿಗೆ ಹೋಗಿ ಇನ್ನು ತನ್ನನ್ನು ಗೆಲ್ಲುವವರು ಯಾರೂ ಇಲ್ಲವೆಂದು ಬೀಗುತ್ತಾನೆ. ಈ ಸಂದರ್ಭದಲ್ಲಿ ಹೆದರಿದ ಸೀತೆ ಮೂರ್ಛೆ ತಪ್ಪಿ ಬಿದ್ದಾಗ ರಾವಣನಿಗೆ ಸೀತೆಯ ಮೇಲಿನ ವ್ಯಾಮೋಹ ಕ್ಷಣಮಾತ್ರದಲ್ಲಿ ಇಲ್ಲವಾಗುತ್ತದೆ. ಅವಳ ಮೇಲೆ ಅನುಕಂಪ, ಕರುಣೆಗಳು ಉಕ್ಕಿ ಹರಿಯುತ್ತವೆ. ರಾವಣನ ಉದಾತ್ತ ಗುಣ ಈ ಸಂದರ್ಭದಲ್ಲಿ ಅನಾವರಣಗೊಳ್ಳುತ್ತದೆ. ಆ ಬಳಿಕ, ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಗೊಳ್ಳುವ ರಾವಣನ ಚಿತ್ರಣವಿದೆ. ಬದಲಾದ ರಾವಣ ಸೀತೆಯನ್ನು ರಾಮನಿಗೆ ಒಪ್ಪಿಸಲು ನಿರ್ಧರಿಸಿದರೂ ಹಾಗೆ ಮಾಡದೆ , ಯುದ್ಧದಲ್ಲಿ ತನ್ನ ಪರಾಕ್ರಮವನ್ನು ತೋರ್ಪಡಿಸಿ, ರಾಮನನ್ನು ಸೆರೆಹಿಡಿದು ತಂದು ಸೀತೆಯನ್ನು ಕೊಡಲು ತೀರ್ಮಾನಿಸುತ್ತಾನೆ. ಇಲ್ಲಿ ಪರಾಕ್ರಮ ಸಹಿತವಾದ ರಾವಣನ ಉದಾತ್ತ ವ್ಯಕ್ತಿತ್ವವನ್ನು ಕಾಣಬಹುದು.

ಭಾಷಾಭ್ಯಾಸ

I. ನಾನಾರ್ಥಗಳನ್ನು ಬರೆಯಿರಿ

ಸೂಳ್ - ಸರದಿ , ಸಮಯ

ಕರ. - ಹಸ್ತ , ತೆರಿಗೆ

ರಾಗ. - ಪ್ರೀತಿ , ಬಣ್ಣ

ಕಳೆ - ಕಾಂತಿ , ವ್ಯವಕಲನ , ಅನಗತ್ಯ ಸಸ್ಯ.

ಬಗೆ - ವಿಧ , ಯೋಚಿಸು , ಇರಿಯು

ದೊರೆ - ಲಭಿಸು , ರಾಜ

ಗಂಡ. - ಪತಿ , ಅಪಾಯ , ಯಜಮಾನ

II. ತತ್ಸಮ ರೂಪಗಳನ್ನು ಬರೆಯಿರಿ

ಜಸ - ಯಶ

ಬನ್ನ. - ಭಂಗ

ಬೀರ. - ವೀರ

ಮೊಗ. - ಮುಖ

ಪರಿಕಿಸು - ಪರೀಕ್ಷಿಸು

III ಎರಡೆರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.

ಪ್ರಮೋದ. - ಆನಂದ , ಸಂತೋಷ

ಸಲಿಲ. - ಜಲ, ನೀರು

ವಕ್ತ್ರ. - ಮುಖ , ಆನನ, ವದನ

ನೀಲೀರಾಗ. - ದೃಢ ಪ್ರೀತಿ ,
ಸ್ಥಿರ ಪ್ರೀತಿ

ಪರಾಭವ. - ಸೋಲು , ಅಪಜಯ

ಕಡುಪು - ಶೌರ್ಯ , ಪರಾಕ್ರಮ

IΙΙ. ಕಾವ್ಯದಲ್ಲಿ ಬಂದ ಕೆಲವು ನಾಮಪದಗಳು

ರಾವಣ , ಧ್ರುವ , ಲಕ್ಷ್ಮೀಧರ , ರಾಮಸ್ವಾಮಿ , ಅಂಗದ , ಭೃಂಗ , ಮಯ , ಪದ್ಮ , ಜಾನಕಿ , ಸೀತಾದೇವಿ , ಇತ್ಯಾದಿ

************